# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 35

**ಸ್ವಾಮಿ ನಿತ್ಯಸ್ಥಾನಂದ**

### ವೇದಾಂತ ವಿಚಾರ

**ಶ್ರೀರಾಮಕೃಷ್ಣರು:** ‘‘ವೇದಾಂತ ವಿಚಾರದ ಮುಂದೆ ಭಗವಂತನ ರೂಪಗಳೆಲ್ಲ ಗಾಳಿಯಲ್ಲಿ ಹಾರಿಹೋಗಿಬಿಡುತ್ತವೆ. ಆದರೆ ಕೊನೆಯ ಸಿದ್ಧಾಂತ: ಬ್ರಹ್ಮವೇ ಸತ್ಯ, ನಾಮರೂಪಯುಕ್ತ ಈ ಜಗತ್ತು ಮಿಥ್ಯಾ.‘ನಾನು ಭಕ್ತ’ ಎಂಬ ಭಾವನೆ ಭಕ್ತನಲ್ಲಿ ಇರುವವರೆಗೆ ಆತನಿಗೆ ಸಾಧ್ಯವಾಗುತ್ತದೆ ಭಗವಂತನನ್ನು ದರ್ಶನ ಮಾಡಲು, ಆತನನ್ನು ಒಬ್ಬ ವ್ಯಕ್ತಿ ಎಂದು ಭಾವಿಸಲು. ವಿಚಾರದ ದೃಷ್ಟಿಯಿಂದ ನೋಡಿದರೆ ಭಕ್ತನ ‘ಅಹಂ’ ಎಂಬುದು ಆತನನ್ನು ಭಗವಂತನಿಂದ ಒಂದು ಸ್ವಲ್ಪ ದೂರದಲ್ಲೇ ನಿಲ್ಲಿಸಿಬಿಟ್ಟಿರುತ್ತದೆ. ಕೃಷ್ಣನ ಅಥವಾ ಕಾಳಿಯ ವಿಗ್ರಹ ಮೂರುವರೆ ಮೊಳ ಮಾತ್ರ ಇದೆಯಲ್ಲ ಏಕೆ ಗೊತ್ತೆ? ಸೂರ್ಯ ದೂರದಲ್ಲಿರುವುದರಿಂದ ಚಿಕ್ಕದಾಗಿ ಕಾಣುತ್ತಾನೆ. ಹತ್ತಿರ ಹೋಗಿ ನೋಡು, ಆತ ಎಷ್ಟೊಂದು ದೊಡ್ಡವನು, ಗ್ರಹಿಸಲೇ ಸಾಧ್ಯವಾಗುವುದಿಲ್ಲ. ಮತ್ತೆ ನೋಡು, ಕಾಳಿಯ ಮತ್ತು ಕೃಷ್ಣನ ವಿಗ್ರಹ ಕಪ್ಪಾಗಿದೆಯಲ್ಲ ಏಕೆ? ಅದಕ್ಕೂ ಕಾರಣ ದೂರವೇ. ಉದಾಹರಣೆಗೆ ಸಮುದ್ರದ ನೀರು. ಅದು ದೂರದಿಂದ ಹಸಿರು, ನೀಲಿ ಅಥವಾ ಕಪ್ಪು ಬಣ್ಣದ್ದಾಗಿ ಕಾಣುತ್ತದೆ. ಹತ್ತಿರ ಹೋಗಿ ಕೈಯಲ್ಲಿ ಒಂದು ಸ್ವಲ್ಪ ನೀರನ್ನು ತೆಗೆದುಕೊಂಡು ನೋಡು. ಅದಕ್ಕೆ ಯಾವ ಬಣ್ಣವೂ ಇಲ್ಲ. ಆಕಾಶ ದೂರದಿಂದ ನೀಲವರ್ಣದ್ದಾಗಿ ಕಾಣುತ್ತದೆ. ಹತ್ತಿರದಲ್ಲಿ ನೋಡು, ಅದಕ್ಕೆ ಯಾವ ಬಣ್ಣವೂ ಇಲ್ಲ.

‘‘ಅದಕ್ಕಾಗಿಯೇ ನಾನು ಹೇಳುವುದು, ವೇದಾಂತ ವಿಚಾರದ ದೃಷ್ಟಿಯಿಂದ ಬ್ರಹ್ಮ ನಿರ್ಗುಣ ಎಂಬುದಾಗಿ. ಆತನ ನೈಜ ರೂಪ ಏನು ಎಂಬುದನ್ನು ಬಾಯಿಂದ ವರ್ಣನೆ ಮಾಡಲಾಗುವುದಿಲ್ಲ. ಆದರೆ ನಿನ್ನ ವ್ಯಕ್ತಿತ್ವ ಸತ್ಯವಾಗಿರುವವರೆಗೆ ಜಗತ್ತು ಸತ್ಯ, ಭಗವಂತನ ನಾನಾ ರೂಪಗಳೂ ಸತ್ಯ. ಭಗವಂತ ಒಬ್ಬ ವ್ಯಕ್ತಿ ಎಂಬ ಭಾವನೆಯೂ ಸತ್ಯ.’’ *(ಶ್ರೀರಾಮಕೃಷ್ಣ ವಚನವೇದ, ಸಂ.೧, ಪು. ೧೦೩)*

ನಮ್ಮಲ್ಲಿ ವ್ಯಕ್ತಿಭಾವ ಇರುವವರೆಗೂ ವಸ್ತುಭಾವವೂ ಇದ್ದೇ ಇರುತ್ತದೆ. ನಾನೊಬ್ಬ ಮನೋಭೌತಿಕ ವ್ಯಕ್ತಿಯಾಗಿ ನಾಮರೂಪಾತ್ಮಕ ಜಗತ್ತು ಮಿಥ್ಯೆ ಎಂದು ಹೇಳಿದರೆ ಅದು ಕೇವಲ ಬಾಯಿಮಾತಾಗುತ್ತದೆ. ವಿಷಯವಸ್ತುಗಳಲ್ಲಿ ವೈರಾಗ್ಯವನ್ನು ಹೆಚ್ಚಿಸಿಕೊಳ್ಳಲು ಆ ರೀತಿ ಭಾವಿಸುವುದು ಸಹಾಯವಾಗಬಹುದು ಅಷ್ಟೆ. ನಮ್ಮಲ್ಲಿ ವ್ಯಕ್ತಿಭಾವವಿರುವವರೆಗೂ(sense of individuality) ಭಗವಂತನನ್ನೂ ಒಬ್ಬ ವ್ಯಕ್ತಿಯಾಗಿಯೇ ಪೂಜಿಸಬೇಕಾಗುತ್ತದೆ (Personal God). ತೀವ್ರ ವ್ಯಕ್ತಿಭಾವವನ್ನು ಇಟ್ಟುಕೊಂಡು ನಾವು ನಿರ್ಗುಣೋಪಾಸಕರೆಂದು ಹೇಳಿಕೊಳ್ಳುವುದರಲ್ಲಿ ಅರ್ಥವಿಲ್ಲ. ಅದಕ್ಕಾಗಿಯೇ ಸ್ವಾಮಿ ಯತೀಶ್ವರಾನಂದರು ಹೇಳುತ್ತಾರೆ: ‘‘ಭಗವಂತನನ್ನು ನಿರ್ವ್ಯಯಕ್ತಿಕಗೊಳಿಸುವುದಕ್ಕೆ ಮುಂಚೆ ನಮ್ಮನ್ನು ನಾವು ನಿರ್ವ್ಯಯಕ್ತಿಕಗೊಳಿಸಿಕೊಳ್ಳಬೇಕು.’’(Before depersonising God, we have to depersonise ourselves).



ದೇವರನ್ನು ನಾವು ಸಗುಣ ಎಂದು ಹೇಳಿದಾಗ ಅವನು ಗುಣಗಳಿಂದ ಕೂಡಿದವನು ಎಂದರ್ಥ. ಒಂದು ವಸ್ತುವು ಗುಣಗಳಿಂದ ಕೂಡಿದೆ ಎಂದರೆ ಅಲ್ಲಿ ವಸ್ತುವೇ ಪ್ರಧಾನವಾಗಿರುತ್ತದೆ. ಹಾಗಾದರೆ ವಸ್ತುವಾವುದು ಎಂದು ವಿಶ್ಲೇಷಿಸುತ್ತ ಹೋದರೆ ನಮ್ಮ ಮನಸ್ಸಿಗೆ ಎಟಕುವ ಯಾವ ವಸ್ತುವೂ ನಮಗೆ ಸಿಗುವುದಿಲ್ಲ; ಅದು ಹಾಗೆ ಸಿಕ್ಕಿದರೆ ಅದು ಗುಣಸಹಿತವೇ ಆಗಿರಬೇಕಾಗುತ್ತದೆ. ಆದ್ದರಿಂದ ಆ ವಸ್ತು ನಮ್ಮ ಮನಸ್ಸನ್ನು ಮೀರಿರಬೇಕಾಗುತ್ತದೆ. ವಸ್ತುರಹಿತ ಗುಣಗಳನ್ನೂ ನಾವು ಕಲ್ಪಿಸಿಕೊಳ್ಳಲಾರೆವು. ಆದ್ದರಿಂದ ವಸ್ತು ಮತ್ತು ಗುಣಗಳು ಇವೆರಡೂ ನಮ್ಮ ಮನಸ್ಸಿಗೆ ಮೀರಿದವು. ಆದ್ದರಿಂದ ಸಗುಣದೇವರು ನಮ್ಮ ವಾಗಿಂದ್ರಿಯಮನಸ್ಸುಗಳಿಗೆ ಮೀರಿರಬೇಕು. ವಾಗಿಂದ್ರಿಯ ಮನಸ್ಸುಗಳಿಗೆ ಮೀರಿದುದು ನಿರ್ಗುಣ-ನಿರಾಕಾರವೇ ಆಗಿರಬೇಕು.

## ಸಮಾಧಿ

**ಶ್ರೀರಾಮಕೃಷ್ಣರು:** ''ಒಮ್ಮೆ ಒಬ್ಬ ನನ್ನನ್ನು ಕೇಳಿದ: 'ಮಹಾಶಯರೇ, ನನಗೆ ಸಮಾಧಿಯನ್ನು ಕಲಿಸಿಕೊಡಲು ನಿಮಗೆ ಸಾಧ್ಯವೆ?

''ಸಮಾಧಿ ದೊರೆಯಿತು ಎಂದರೆ ಎಲ್ಲ ಕರ್ಮಗಳೂ ನಮ್ಮನ್ನು ಬಿಟ್ಟು ಹೊರಟುಹೋಗುತ್ತವೆ. ಪೂಜೆ, ಜಪತಪಾದಿ ಕರ್ಮ, ಪ್ರಾಪಂಚಿಕ ಕರ್ಮ ಎಲ್ಲ ಬಿಟ್ಟು ಹೊರಟು ಹೋಗುತ್ತವೆ. ಮೊದಲು ಕರ್ಮದ ಗಡಿಬಿಡಿ ಹೆಚ್ಚಾಗಿಯೇ ಇರುತ್ತದೆ. ಭಗವಂತನ ಕಡೆಗೆ ಮುಂದುವರಿದಷ್ಟೂ ಕರ್ಮದ ಆಡಂಬರವೂ ಕಡಿಮೆಕಡಿಮೆಯಾಗುತ್ತ ಬರುತ್ತದೆ. ಅಷ್ಟೇ ಅಲ್ಲ, ಆತನ ನಾಮಗುಣಕೀರ್ತನೆಯೂ ಕೊನೆಗೆ ಸಾಧ್ಯವಿಲ್ಲದ್ದಾಗಿ ಬಿಡುತ್ತದೆ. (ಶಿವನಾಥನಿಗೆ) ನೀನು ಈ ಸಭೆಗೆ ಬರುವ ಮುನ್ನ ನಿನ್ನ ನಾಮಗುಣಕೀರ್ತನೆ ಇಲ್ಲಿ ಬಹಳವಾಗಿ ನಡೆಯುತ್ತಿತ್ತು. ನೀನೇ ಪ್ರತ್ಯಕ್ಷವಾಗಿ ಇಲ್ಲಿಗೆ ಬಂದೆಯೊ ಇಲ್ಲವೊ ಒಡನೆ ಅವೆಲ್ಲವೂ ನಿಂತು ಹೋದವು. ಈಗ ಕೇವಲ ನಿನ್ನ ದರ್ಶನದಿಂದಲೇ ಜನರಿಗೆ ಆನಂದ ಆಗುತ್ತದೆ. ಅವರು ಕೇವಲ ಹೇಳುತ್ತಿದ್ದಾರೆ: 'ಇಗೊ, ಇಲ್ಲಿ ಶಿವನಾಥ!' ನಿನ್ನ ಸಂಬಂಧವಾಗಿ ಉಳಿದ ಮಾತುಗಳೆಲ್ಲವೂ ನಿಂತು ಹೋಗಿಬಿಟ್ಟವು'' *(ಅಲ್ಲೇ, ಪು. ೧೦೪-೫)*

ವಾಸ್ತವವಾದುದನ್ನು, ಸ್ಥೂಲವಾದುದನ್ನು ಇತರರಿಗೆ ಕಲಿಸಿಕೊಡಬಹುದು. ಆದರೆ ಸೂಕ್ಷ್ಮವಾದುದನ್ನು (abstract items) ಇತರರಿಗೆ ಕಲಿಸಿಕೊಡಲಾಗುವುದಿಲ್ಲ. ಕೋಪ ಮಾಡಿಕೊಳ್ಳುವುದು ಹೇಗೆ ಎಂಬುದನ್ನು ಕಲಿಸಲು ಸಾಧ್ಯವೆ? ಹಾಗೆಯೇ ಉಳಿದ ಸೂಕ್ಷ್ಮ ಭಾವನೆಗಳೂ ಕೂಡ. ಇವೆಲ್ಲ ಅನುಭವಿಸಿಯೇ ತಿಳಿಯಬೇಕಾದ ವಿಷಯಗಳು. ಹಾಗಿರುವಾಗ ಸೂಕ್ಷ್ಮಾತಿಸೂಕ್ಷ್ಮವಾದ ಭಗವದನುಭವವನ್ನು, ಸಮಾಧಿಯನ್ನು ಕಲಿಸಿಕೊಡಲು ಹೇಗೆ ಸಾಧ್ಯ ? ಬಹುಶಃ ಯಾವುದೇ ಅನುಭವವೇದ್ಯವನ್ನೂ ಇತರರಿಗೆ ಕಲಿಸಿಕೊಡಲಾಗುವುದಿಲ್ಲ. ಅಡಿಗೆ ಮಾಡುವುದನ್ನು ಕಲಿಸಬಹುದು. ಅಡಿಗೆಯ ರುಚಿಯನ್ನು ಅನುಭವಿಸಿಯೇ ತಿಳಿಯಬೇಕು. ಒಂದು ಹೂವಿನ ಬಗ್ಗೆ ವೈಜ್ಞಾನಿಕವಾಗಿ ತಿಳಿಸಿಕೊಡಬಹುದು. ಆದರೆ ಹೂವಿನ ಸೌಂದರ್ಯಾನುಭವವನ್ನು ಕಲಿಸಲಾದೀತೆ?

ಆಧ್ಯಾತಿಕ ಸಾಧನೆಯಲ್ಲಿ ಮುಂದುವರಿಯುವುದೆಂದರೆ ಕ್ರಮಕ್ರಮವಾಗಿ, ಹಂತಹಂತವಾಗಿ ಎಲ್ಲ ಕರ್ಮಗಳೂ ಬಿದ್ದುಹೋಗುವುದು (gradual cessation of all activities). ಸಮಾಧಿಸ್ಥಿತಿಯನ್ನು ಮುಟ್ಟಿದ ಮೇಲೆ ಎಲ್ಲ ಚಟುವಟಿಕೆಗಳೂ ನಿಂತುಹೋಗುತ್ತವೆ. ಎಲ್ಲ ಚಟುವಟಿಕೆಗಳೂ–ಮನಸ್ಸಿನ ಚಟುವಟಿಕೆಯೂ ಕೂಡ–ನಿಂತುಹೋಗುವ ಸ್ಥಿತಿಯನ್ನೇ 'ಸಮಾಧಿ' ಎಂದು ಕರೆಯಬಹುದೇನೋ. ಈ ಸ್ಥಿತಿಯನ್ನು ಬಸವಣ್ಣನವರ ಈ ಕೆಳಗಿನ ವಚನ ಸುಂದರವಾಗಿ ಅಭಿವ್ಯಕ್ತಿಸುತ್ತದೆ:

**ಕಣ್ಗಳು ತುಂಬಿದ ಬಳಿಕ ನೋಡಲಿಲ್ಲ,**
**ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ,**
**ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ,**
**ಮನತುಂಬಿದ ಬಳಿಕ ನೆನೆಯಲಿಲ್ಲ,**
**ಮಹಂತ ಕೂಡಲಸಂಗಮದೇವನ ।**

ಕುಲಾರ್ಣವ ತಂತ್ರದ ಈ ಹೇಳಿಕೆ ಅದೆಷ್ಟು ಸುಂದರವಾಗಿದೆ:

**ಅಕ್ರಿಯೈವ ಪರಾ ಪೂಜಾ ಮೌನಮೇವ ಪರೋ ಜಪಃ ।**

''ನಿಷ್ಕ್ರಿಯನಾಗಿರುವುದೇ ಅತ್ಯಂತ ಶ್ರೇಷ್ಠ ಪೂಜೆ; ಮೌನವೇ ಅತಿ ಶ್ರೇಷ್ಠವಾದ ಜಪ.'' ಅದೇ ತಂತ್ರದ ಇನ್ನೊಂದು ಹೇಳಿಕೆ:

**ತಾವತ್ತಪೋ ವ್ರತಂ ತೀರ್ಥಂ ಜಪಹೋಮಾರ್ಚನಾದಿಕಮ್।**
**ವೇದಶಾಸ್ತ್ರಾಗಮಕಥಾ ಯಾವತ್ತತ್ತ್ವಂ ನ ವಿಂದತೇ ॥**

''ಎಲ್ಲಿಯವರೆಗೆ ತತ್ತ್ವಜ್ಞಾನವು ಉದಯಿಸುವುದಿಲ್ಲವೋ ಅಲ್ಲಿಯವರೆಗೆ ತಪಸ್ಸು, ವ್ರತ, ತೀರ್ಥಯಾತ್ರೆ, ಜಪ, ಹೋಮ, ಪೂಜೆ ಶಾಸ್ತ್ರಾಧ್ಯಯನ ಇತ್ಯಾದಿಗಳೆಲ್ಲ ನಡೆಯುತ್ತವೆ.''

ಇದೇ ಸಂದರ್ಭದಲ್ಲಿ ಮೈತ್ರಿಕೋಪನಿಷತ್ತಿನ ತುಂಬ ಸ್ವಾರಸ್ಯಕರವಾದ ಎರಡು ಶ್ಲೋಕಗಳು ನೆನಪಿಗೆ ಬರುತ್ತವೆ:

**ಮೃತಾ ಮೋಹಮಯೀ ಮಾತಾ ಜಾತೋ ಬೋಧಮಯಃ ಸುತಃ ।**
**ಸೂತಕದ್ವಯ ಸಂಪ್ರಾಪ್ತೌ ಕಥಂ ಸಂಧ್ಯಾಮುಪಾಸ್ಮಹೇ ॥**

''ಮೋಹವೆಂಬ ತಾಯಿ ಮೃತಪಟ್ಟಿದ್ದಾಳೆ, ಜ್ಞಾನವೆಂಬ ಮಗನ ಜನನವಾಗಿದೆ. ಹೀಗೆ ಎರಡು ಸೂತಕಗಳಿರುವಾಗ ಹೇಗೆ ಸಂಧ್ಯಾವಂದನೆ ಮಾಡುವುದು?''

**ಹೃದಾಕಾಶೇ ಚಿದಾದಿತ್ಯಃ ಸದಾ ಭಾಸತಿ ಭಾಸತಿ।**
**ನಾಸ್ತಮೇತಿ ನ ಚೋದೇತಿ ಕಥಂ ಸಂಧ್ಯಾಮುಪಾಸ್ಮಹೇ ॥**

''ಹೃದಯಾಕಾಶದಲ್ಲಿ ಚಿದಾದಿತ್ಯನು ಸದಾ ಬೆಳಗುತ್ತಿರುವನು. ಅವನು ಉದಯಿಸುವುದೂ ಇಲ್ಲ, ಅಸ್ತಮಿಸುವುದೂ ಇಲ್ಲ. ಹಾಗಿರುವಾಗ ನಾನು ಹೇಗೆ ಸಂಧ್ಯಾವಂದನೆ ಮಾಡಲಿ.''

## ಕರ್ಮ ತಾನಾಗಿಯೇ ಬಿದ್ದುಹೋಗಬೇಕು

ಕರ್ಮ ಕ್ರಮೇಣ ಬಿದ್ದುಹೋಗುತ್ತದೆ ಎಂಬುದನ್ನು ಶ್ರೀರಾಮಕೃಷ್ಣರು ಒಂದು ಮನೋಜ್ಞ ಉದಾಹರಣೆಯ ಮೂಲಕ ವಿವರಿಸುತ್ತಾರೆ: ಸಂತರ್ಪಣೆ ಪ್ರಾರಂಭವಾಗುವುದಕ್ಕೆ ಮೊದಲು ಸಾಕಷ್ಟು ಮಾತಿನ ಗದ್ದಲವಿರುತ್ತದೆ. ಊಟಕ್ಕೆ ಕುಳಿತ ಮೇಲೆ ಮಾತು ಬಹುಮಟ್ಟಿಗೆ ಕಡಿಮೆಯಾಗುತ್ತದೆ. ಊಟ ಪ್ರಾರಂಭವಾದ ಮೇಲೆ ಕೇವಲ ಊಟದ ಸಪ್ಪಳವಷ್ಟೇ. ಮಧ್ಯಮಧ್ಯದಲ್ಲಿ ಸ್ವಲ್ಪ ಮಾತು ಕೇಳಬಹುದು. (ಶ್ರೀರಾಮಕೃಷ್ಣರ ಸಮಯದಲ್ಲಿ ಮೊಬೈಲ್ ಇರಲಿಲ್ಲ!) ಊಟ ಮುಗಿದ ಮೇಲಂತೂ ವಿಶ್ರಾಂತಿ, ನಿದ್ರೆ. ಆಗ ಎಲ್ಲ ಸದ್ದೂ ಅಡಗಿ ಹೋಗುತ್ತದೆ. ಮಾತಿನ ಗದ್ದಲವೆಂದರೆ ಪ್ರಾಪಂಚಿಕ ವಿಷಯದಲ್ಲಿ ತೊಡಗಿರುವುದು. ಊಟ ಮಾಡುವುದೆಂದರೆ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗುವುದು. ಭೋಜ್ಯಗಳು ವಿವಿಧ ಆಧ್ಯಾತ್ಮಿಕ ಸಾಧನೆಗಳು. ಅವು ನಮಗೆ ರುಚಿಸುವಂತಾಗಬೇಕು (ನಾಮೇ ರುಚಿ). ಕೊನೆಯಲ್ಲಿ ನಿದ್ರೆ, ಎಂದರೆ ಸಮಾಧಿ ಸ್ಥಿತಿ.

ಕರ್ಮವು ತಾನಾಗಿಯೇ ಬಿದ್ದು ಹೋಗಬೇಕಾದರೆ ನಾವು ಯಾವ ರೀತಿ ಕರ್ಮ ಮಾಡಬೇಕು ?

**ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ ।**
**ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥** *(ಗೀತೆ, ೫.೧೦)*

''ಭಗವಂತನಲ್ಲಿ ಎಲ್ಲ ಕರ್ಮಗಳನ್ನು ಸಮರ್ಪಿಸಿ ಅನಾಸಕ್ತಿಯಿಂದ ಯಾರು ಕರ್ಮ ಮಾಡುತ್ತಾರೋ ಅವರಿಗೆ, ತಾವರೆ ಎಲೆಗೆ ನೀರು ಅಂಟದಿರುವಂತೆ, ಪಾಪ-ಪುಣ್ಯ ಫಲಗಳು ಅಂಟುವುದಿಲ್ಲ.'' ಇದರಿಂದಾಗಿ ಮತ್ತೆ ಕರ್ಮ ಮಾಡಬೇಕಾದ ಅನಿವಾರ್ಯತೆ ಇರುವುದಿಲ್ಲ. ತಾವರೆಯು ನೀರಿನಲ್ಲಿರುವಂತೆ ದೇಹ ಸಂಸಾರದ ನೀರಿನಲ್ಲಿರಲಿ. ಮನಸ್ಸೆಂಬ ಎಲೆ ಮಾತ್ರ ನೀರಿನ ಮೇಲೆ ತೇಲುತ್ತಿರಲಿ. ಹೀಗಿರುವಾಗ ವಿಷಯದ ಹನಿಗಳು ಅದರ ಮೇಲೆ ಬಿದ್ದರೂ ಜಾರಿ ಹೋಗುತ್ತದೆ. ತಾವರೆ ಹೂವು ಸೂರ್ಯನ ಕಡೆಗೆ ತಿರುಗಿರುವಂತೆ ಹೃದಯಕಮಲವು ಭಗವಂತನ ಕಡೆಗೆ ತಿರುಗಿರಲಿ. ತಾವರೆಯ ಬೇರು ಕೆಸರಿನಲ್ಲಿರುವಂತೆ ನಮ್ಮ ವ್ಯಕ್ತಿತ್ವದ ಬೇರು ಸಂಸ್ಕಾರಗಳಲ್ಲಿದೆ.

### ಲೋಕಶಿಕ್ಷಣ

**ಶ್ರೀರಾಮಕೃಷ್ಣರು:** ''ಆದರೆ ಶಕ್ತಿವಿಶೇಷತೆಯನ್ನು ಒಪ್ಪಲೇಬೇಕು. ಸಾಮಾನ್ಯ ಜೀವಿಗಳು ಲೋಕಶಿಕ್ಷಣ ಮಾಡಲು ಹೆದರುತ್ತಾರೆ. ಸಾಮಾನ್ಯ ಕಡ್ಡಿ ಹೇಗೋ ಮಾಡಿ ತಾನು ಮಾತ್ರ ನೀರಿನ ಮೇಲೆ ತೇಲಿಹೋಗಬಲ್ಲದು. ಆದರೆ ಅದರ ಮೇಲೇನಾದರೂ ಒಂದು ಹಕ್ಕಿ ಕುಳಿತರೂ ಅದು ಮುಳುಗಿಹೋಗುತ್ತದೆ. ಆದರೆ ನಾರದಾದಿಗಳು ಭಾರೀ ದಿಮ್ಮಿಗಳಂಥ ಮನುಷ್ಯರು. ಈ ವಿಧದ ದಿಮ್ಮಿ ತಾನೂ ತೇಲಿಹೋಗುವುದಲ್ಲದೆ ಮನುಷ್ಯರನ್ನೂ ಹಸುಗಳನ್ನೂ ಕೊನೆಗೆ ಆನೆಯನ್ನೂ ಹೊತ್ತುಕೊಂಡು ಹೋಗಿಬಿಡುತ್ತದೆ.'' *(ವಚನವೇದ, ಸಂ.೧, ಪು.೧೦೬)*

ಇಲ್ಲಿ ಸಾಮಾನ್ಯ ಜೀವಿಗಳು ಎಂದರೆ ಪ್ರಾಮಾಣಿಕವಾಗಿ ಆಧ್ಯಾತ್ಮಿಕ ಸಾಧನೆ ಮಾಡುತ್ತ ಸಿದ್ಧಿಯನ್ನು ಪಡೆಯಲು ಶ್ರಮಿಸುತ್ತಿರುವವರು. ಅವರು ತಾವೇ ಕಷ್ಟಪಡುತ್ತಿರುವಾಗ ಇತರರನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಲು ಹೇಗೆ ಸಾಧ್ಯ? ಆದರೆ ಮತ್ತೆ ಕೆಲವರಿದ್ದಾರೆ, ಅವರಿಗೆ ತಮ್ಮ ಉದ್ಧಾರಕ್ಕಿಂತ ಇತರರ ಉದ್ಧಾರವೇ ಮುಖ್ಯವಾಗಿರುತ್ತದೆ. ಮುಂಡಕೋಪನಿಷತ್ತಿನ ಒಂದು ಮಂತ್ರ ಇಂಥವರನ್ನು ಕುರಿತಾಗಿದೆ: *(೧.೨.೮)*

**ಅವಿದ್ಯಾಯಾಮಂತರೇ ವರ್ತಮಾನಾಃ।**
**ಸ್ವಯಂ ಧೀರಾಃ ಪಂಡಿತಂ ಮನ್ಯಮಾನಾಃ**
**ಜಂಘನ್ಯಮಾನಾಃ ಪರಿಯಂತಿ ಮೂಢಾಃ**
**ಅಂಧೇನೈವ ನೀಯಮಾನಾ ಯಥಾಂಧಾಃ ॥**

''ತಾವೇ ಅವಿದ್ಯೆಯ ವಶನಾಗಿದ್ದರೂ, ತಾವೇ ಜ್ಞಾನಿಗಳು, ಪಂಡಿತರು ಎಂದು ಭಾವಿಸುತ್ತ ಸಂಕಟಪಡುತ್ತಿರುವ ಮೂಢರು, ಕುರುಡರು ಕರೆದುಕೊಂಡು ಹೋಗುತ್ತಿರುವ ಕುರುಡರಂತೆ, ಸುತ್ತುತ್ತಿರುವರು.''

ಒಂದು ಹಾಸ್ಯಪ್ರಸಂಗ: ಬೋಧಕರೊಬ್ಬರು ಪರ ಊರಿಗೆ ಹೋಗಿದ್ದರು. ಒಂದು ಪತ್ರವನ್ನು ಬರೆದು, ಅದನ್ನು ರಿಜಿಸ್ಟರ್ಡ್ ಪೋಸ್ಟ್ ಮಾಡುವುದಕ್ಕೆ ಅಂಚೆಕಛೇರಿಗೆ ಹೋಗಬೇಕಿತ್ತು. ಅವರಿಗೆ ದಾರಿ ಗೊತ್ತಿರಲಿಲ್ಲ. ಒಬ್ಬ ಹುಡುಗನನ್ನು ಕೇಳಿದಾಗ ಅವನು ಅವರನ್ನು ತಾನೇ ಅಂಚೆಕಛೇರಿಗೆ ಕರೆದುಕೊಂಡು ಹೋದನು. ಅವನು ಮಾಡಿದ ಸಹಾಯಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಬೋಧಕರು ಹೇಳಿದರು: ''ಇಂದು ಸಂಜೆ ಇಂತಹ ಸ್ಥಳದಲ್ಲಿ ನನ್ನ ಉಪನ್ಯಾಸವಿದೆ, ನೀನು ಬರಬಹುದು. ನಿನಗೆ ಪ್ರವೇಶ ಉಚಿತ.'' ಹುಡುಗ: ''ಉಪನ್ಯಾಸದ ವಿಷಯ?'' ಬೋಧಕ: ''ಸ್ವರ್ಗಕ್ಕೆ ದಾರಿ''. ಹುಡುಗ: ''ಹಾಗಾದರೆ ನಾನು ಬರುವುದಿಲ್ಲ.'' ಬೋಧಕ: ''ಕಾರಣ?'' ಹುಡುಗನ ಉತ್ತರ: ''ನಿಮಗೆ ಅಂಚೆಕಛೇರಿಗೆ ದಾರಿ ಗೊತ್ತಿಲ್ಲ, ಇನ್ನು ಸ್ವರ್ಗಕ್ಕೆ ದಾರಿ ತೋರಿಸುವುದೆಂತು?''

### ಭಗವಂತನ ಐಶ್ವರ್ಯ ವರ್ಣನೆ ಏಕೆ ಮಾಡುತ್ತೇವೆ?

**ಶ್ರೀರಾಮಕೃಷ್ಣರು:** ''ಒಳ್ಳೆಯದು, ನೀವು ಭಗವಂತನ ಐಶ್ವರ್ಯದ ವರ್ಣನೆಯ ಕಡೆ ಅಷ್ಟೊಂದಾಗಿ ಮನಸ್ಸು ಕೊಡುತ್ತೀರಲ್ಲ ಏಕೆ? ನಾನು ಕೇಶವಚಂದ್ರನಿಗೂ ಇದೇ ಪ್ರಶ್ನೆ ಹಾಕಿದೆ. ಒಂದು ದಿನ ಆತ ಮತ್ತು ಆತನ ಗುಂಪು ಎಲ್ಲರೂ ದಕ್ಷಿಣೇಶ್ವರಕ್ಕೆ ಬಂದಿದ್ದರು. ನಾನು ಅವರಿಗೆ ಹೇಳಿದೆ: 'ನಿಮ್ಮಗಳ ಲೆಕ್ಚರ್ ಕೇಳಬೇಕು ಅಂತ ಇದ್ದೇನೆ.' ಗಂಗಾಘಟ್ಟದ ಎದುರಿಗಿರುವ ಮುಖಮಂಟಪದಲ್ಲಿ ಎಲ್ಲರೂ ನೆರೆದರು. ಕೇಶವಸೇನ ಉಪದೇಶ ಕೊಡಲಾರಂಭಿಸಿದ. ಆತ ಬಹಳ ಚೆನ್ನಾಗಿ ಮಾತನಾಡಿದ. ನನಗೆ ಭಾವಾವಸ್ಥೆ ಬಂದು ಬಿಟ್ಟಿತು. ಉಪನ್ಯಾಸವಾದ ನಂತರ ನಾನು ಕೇಶವನಿಗೆ ಹೇಳಿದೆ: 'ನೀನು ಇವನ್ನು ಬಾರಿಬಾರಿಗೂ ಹೇಳುತ್ತೀಯಲ್ಲ! – ಹೇ ಭಗವಂತ, ನೀನು ಎಂಥ ಸುಂದರ ಹೂವುಗಳನ್ನು ಸೃಷ್ಟಿಸಿದ್ದೀಯೆ! ಹೇ ಭಗವಂತ, ನೀನು ಆಕಾಶ, ನಕ್ಷತ್ರ, ಸಮುದ್ರ ಸೃಷ್ಟಿಸಿದ್ದೀಯೆ! ಇತ್ಯಾದಿ – ಏಕೆ?' ಯಾರಿಗೆ ತಮಗೇ ವೈಭವದ ಮೇಲೆಯೇ ಪ್ರೀತಿ ಇದೆಯೋ, ಅವರು ಮಾತ್ರವೇ ಭಗವಂತನ ವೈಭವವನ್ನು ವರ್ಣಿಸಲು ಪ್ರೀತಿಸುತ್ತಾರೆ.'' *(ವಚನವೇದ, ಸಂ.೧, ಪು.೧೦೬)*

ಯಾರು ಸಂಪತ್ತನ್ನೇ ಬಯಸುತ್ತಾರೋ ದೇವರು ಸಂಪದ್ಭರಿತನೆಂದು ಕೊಂಡಾಡುತ್ತಾರೆ — ಚಿನ್ನದ ಕಿರೀಟ, ಬೆಳ್ಳಿಯ ರಥ ಇತ್ಯಾದಿಗಳನ್ನು ಅರ್ಪಿಸುತ್ತಾರೆ. ಯಾರು ಯಶಸ್ಸನ್ನು ಬಯಸುತ್ತಾರೋ ದೇವರನ್ನು ಮಹಾ ಕೀರ್ತಿಶಾಲಿಯೆಂದು ಕೊಂಡಾಡುತ್ತಾರೆ. ಯಾರು ಅಧಿಕಾರವನ್ನೇ ಬಯಸುತ್ತಾರೋ ದೇವರನ್ನು ಜಗತ್ತಿಗೇ ಒಡೆಯ ಎಂದು ಸ್ತುತಿಸುತ್ತಾರೆ; ಸರ್ವಾಧಿಕಾರಿಯಂತೆ ಜಗತ್ತನ್ನು ಆಳುತ್ತಿರುವನು ಎಂದೆಲ್ಲ ಬಣ್ಣಿಸುತ್ತಾರೆ. ಏನನ್ನೂ ಬಯಸದವರೆಗೆ ಭಗವಂತನ ಬಾಹ್ಯ ವೈಭವಗಳಾವುವೂ ಕಾಣಿಸುವುದೇ ಇಲ್ಲ , ಅವನ ನಿಜ ಸ್ವರೂಪವೊಂದೇ ಅವರ ದೃಷ್ಟಿಗೆ ಗೋಚರವಾಗುತ್ತದೆ. ಅವರು ಭಗವಂತನನ್ನು ಮಾತ್ರ ಬಯಸುತ್ತಾರೆ.

*(ಮುಂದುವರಿಯುವುದು)*